ಶ್ರೀ ವಾಟಾಳ್ ನಾಗರಾಜ್ : ಬೀದಿಗೆ ಬಿದ್ದು ಹೋಗಿದ್ದಾರೆ. ಅವಕಾಶ ಕೊಡಬೇಕು.

ಅಧ್ಯಕ್ಷರು : ನಾನು ಒಪ್ಪುತ್ತೇನೆ. ಪ್ರಶ್ನೋತ್ತರ ಆಗಲಿ. ಅವರೂ ಚರ್ಚೆ ಮಾಡಲು ಅನುಮತಿ ಕೇಳಿದ್ದಾರೆ, ನೀವೂ ಸಹ ಕೇಳಿದ್ದೀರಿ. ಪ್ರಶ್ನೋತ್ತರ ಆಗಲಿ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದ ನಿರ್ಧಾರ ಏನು ಎಂದು ಹೇಳಿ ಉತ್ತರ ಕೊಡಬೇಕು.

ಅಧ್ಯಕ್ಷರು : ಪ್ರಶ್ನೋತ್ತರ ಆಗಲಿ.

ಶ್ರೀ ಆರಗ ಜ್ಞಾನೇಂದ್ರ : ಸಾರ್ ಒಂದು ನಿಮಿಷ ಅವಕಾಶಕ್ಕಾಗಿ ವಿನಂತಿಸುತ್ತೇನೆ.

ಅಧ್ಯಕ್ಷರು : ಪ್ರಶ್ನೋತ್ತರ ಆಗಲಿ.

ಶ್ರೀ ವಾಟಾಳ್ ನಾಗರಾಜ್ : ಒಟ್ಟಾರೆ ಪ್ರತಿಭಟನೆ, ಮೆರವಣಿಗೆ ಎಲ್ಲಾ ಮಾಡಿ ಬೆಂಗಳೂರಿಗೆ ಬಂದಿದ್ದಾರೆ.

ಅಧ್ಯಕ್ಷರು : ಪ್ರಶ್ನೋತ್ತರ ಆದ ನಂತರ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ದಯಮಾಡಿ, ಇದು ಅತ್ಯಂತ ಗಂಭೀರ ಪರಿಸ್ಥಿತಿ ಇದೆ, ಇದನ್ನು ತಾವು ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಶ್ರೀ ಶ್ರೀರಾಮರೆಡ್ಡಿಯವರ ಪ್ರಶ್ನೆ ಇದೆ. ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸುವುದು

121 628): ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ ಜಮೀನು ಮಂಜೂರಾತಿ ಕೋರಿ ಸರ್ಕಾರಕ್ಕೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು;

ಆ) ಈ ಬಗರ್ ಹುಕುಂ ಸಾಗುವಳಿ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಸರ್ಕಾರ ಉದ್ದೇಶಿಸಿದೆಯೆ;

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಜಗದೀಶ ಶೆಟ್ಟರ್ (ಕಂದಾಯ ಸಚಿವರು) :

ಅ)

	ಸ್ವೀಕೃತವಾದ ಅರ್ಜಿ	ಇತ್ಯರ್ಥಗೊಂಡ ಅರ್ಜಿ	ಬಾಕಿ ಇರುವ ಅರ್ಜಿ
ನಮೂನೆ–50	10,91,909	10,62,548	29,361
ನಮೂನೆ–53	10,93,726	6,57,884	4,35,842
ಒಟ್ಟು	**21.85.635**	**17.20.432**	**4.65.203**

ಆ) ಹೌದು.

ಇ) ಈ ಅರ್ಜಿಗಳನ್ನು ವಿಲೇವಾರಿ ಮಾಡಲು ರಾಜ್ಯದ ಎಲ್ಲಾ ತಾಲ್ಲೂಕುಗಳ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗಳನ್ನು ರಚಿಸಿ ಆದೇಶ ಹೊರಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಅರ್ಜಿಗಳನ್ನು ವಿಲೇವಾರಿ ಮಾಡಲು ರಾಜ್ಯದ ಎಲ್ಲಾ ತಾಲ್ಲೂಕುಗಳ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗಳನ್ನು ರಚಿಸಿ ಆದೇಶ ಹೊರಡಿಸಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ. ಅದು ಸರಿಯಾಗಿ ಬಂದಿಲ್ಲ. ಸಕ್ರಮೀಕರಣ ಎಂದು ಬರೆಯಬೇಕು. ಸಮಿತಿ ರಚಿಸಿ ಆದೇಶ ಹೊರಡಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದ್ದಾರೆ. ಈ ಸರ್ಕಾರ ರಚನೆ ಆಗಿ 2004ನೇ ಇಸವಿಯಲ್ಲಿ ನಾವೆಲ್ಲಾ ಆಯ್ಕೆ ಆಗಿ ಬಂದಿದ್ದು, 2004ನೇ ಇಸವಿಯಿಂದ ಎರಡು ವರ್ಷ ಮುಗಿದು ಹೋಗಿ ಎರಡು ತಿಂಗಳಾಯಿತು. ಇದುವರೆಗೂ ಬಗರ್ ಹುಕುಂ ಸಾಗುವಳಿ ಸಮಿತಿಯನ್ನು ರಚನೆ ಮಾಡಲಿಲ್ಲ. ಸರ್ಕಾರದ ಹೇಳಿಕೆಯ ಪ್ರಕಾರನೇ ಇಡೀ ರಾಜ್ಯದಾದ್ಯಂತ 4,65,203 ಅರ್ಜಿಗಳು ಬಾಕಿ ಉಳಿದಿವೆ. ಅದನ್ನು ವಿಲೇವಾರಿ ಮಾಡಲಿಲ್ಲ. ಅಂದರೆ ಬಡವರಿಗೆ ಭೂಮಿ ಹಂಚತಕ್ಕಂಥ ಕೆಲಸಕ್ಕೆ ಇವರು ಪ್ರಯತ್ನ ಮಾಡಲಿಲ್ಲ. ಅದು ಏಕೆ, ಯಾವ ಕಾರಣಕ್ಕೋಸ್ಕರ ಬಗರ್ ಹುಕುಂ ಸಕ್ರಮೀಕರಣದ ಸಮಿತಿಗಳನ್ನು ಮಾಡುವುದಕ್ಕೆ ತಡ ಆಗುತ್ತಿದೆ? ಎರಡು ವರ್ಷ ಸಮಯ ಇದಕ್ಕೆ ಬೇಕಾ? ಏಕೆ ತಡವಾಗುತ್ತಿದೆ ಎನ್ನತಕ್ಕ ಬಗ್ಗೆ ಸರ್ಕಾರ ವಿವರಣೆ ಕೊಡಬೇಕಾಗುತ್ತದೆ. ಏಕೆಂದರೆ ಈ ಸರ್ಕಾರಗಳು ಎರಡು ಬದಲಾವಣೆ ಆಯಿತು. ಎರಡು ಸರ್ಕಾರಗಳಲ್ಲಿ ಮೂರು ಪಕ್ಷಗಳು ಇದ್ದವು. ಕಾಂಗ್ರೆಸ್–ಜೆಡಿಎಸ್ ಒಂದು ಸಲ. ಜೆಡಿಎಸ್–ಮತ್ತು ಬಿಜೆಪಿ ಒಂದು ಸಲ. ಮೂರು ಪಕ್ಷಗಳು, ಮೇಜರ್ ಪಕ್ಷಗಳು. ಬಹಳ ಪ್ರಮುಖವಾದಂತಹ ಮೂರು ಪಕ್ಷಗಳ ಸರ್ಕಾರ ಅಧಿಕಾರದಲ್ಲಿ ಇತ್ತು. ದಿನಬೆಳಗಾದರೆ ನಾವು ರೈತರ ಪರ, ರೈತರಿಗೆ ಹೆಗಲು ಕೊಟ್ಟು ನಿಂತಂಥ ಸರ್ಕಾರ ಎಂದು ಹೇಳತಕ್ಕಂಥ ಸರ್ಕಾರಗಳು. ಬಡವರಿಗೆ ಭೂಮಿ ಹಂಚಲಿಕ್ಕೆ ಯಾವ ಕಾರಣಕ್ಕೋಸ್ಕರ ಸಮಿತಿಯನ್ನು ರಚನೆ ಮಾಡಲಿಲ್ಲ? ಇದಕ್ಕೆ ಉತ್ತರ ಕೊಡಬೇಕು. ಏನು ಕಾರಣ ಎಂದು ಹೇಳಬೇಕು. ಮತ್ತೆ ಮೊದಲನೆಯದರಲ್ಲಿ ಫಾರ್ಮ್ (ನಮೂನೆ 50) ಮತ್ತು ನಮೂನೆ 53 ರಲ್ಲಿ ಸಲ್ಲಿಸತಕ್ಕ ಅವಕಾಶ ಇತ್ತು. ಅಂದರೆ ಫಾರಂ ನಂಬರ್ 50 ರಲ್ಲಿ ಸ್ವೀಕೃತವಾದ ಅರ್ಜಿ 10,91,909, ವಿಲೇವಾರಿ ಆಗಿರತಕ್ಕದ್ದು 10,62,548, ಅದರಲ್ಲಿ ಬಾಕಿ ಇರತಕ್ಕದ್ದು 29,361. ಈ ನಮೂನೆ–50ರಲ್ಲಿ ಅರ್ಜಿಯನ್ನು ತೆಗೆದುಕೊಳ್ಳುತ್ತಿರುವುದು 1981ನೇ ಇಸವಿಯಿಂದ. ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿ ಆಗಿದ್ದಂತಹ ಸಂದರ್ಭದಲ್ಲಿ ಬಂದಂತಹ ಅರ್ಜಿಗಳು, ಅಂದರೆ 1982ರಿಂದ ಇವತ್ತಿನವರೆಗೆ ಅಂದರೆ 2006ರವರೆಗೆ, 25 ವರ್ಷಗಳಿಂದ ಇನ್ನೂ ಪೆಂಡಿಂಗ್ ಉಳಿದಿವೆ. ನಮೂನೆ 53ರಲ್ಲಿ 10,93, 726 ಅರ್ಜಿಗಳು ಬಂದಿವೆ. ಅದರಲ್ಲಿ ಇತ್ಯರ್ಥಗೊಂಡಿರತಕ್ಕದ್ದು, 6,57,884, ಬಾಕಿ ಇರತಕ್ಕದ್ದು 4,35,842. ಅಂದರೆ ಇದು ನಮೂನೆ 53ರ ಫಾರಂ ಎಂದರೆ ಏನು ಇದೆ, ಇದರ ಮೇಲೆ ಅರ್ಜಿ ಹಾಕಬೇಕು ಎಂದು ಮಾನ್ಯ ಜೆ.ಹೆಚ್. ಪಟೇಲ್ ಅವರು ಮುಖ್ಯಮಂತ್ರಿ ಆಗಿದ್ದಾಗ ಹೇಳಿದ್ದು ಮಾನ್ಯ ಜೆ.ಹೆಚ್. ಪಟೇಲ್ ಅವರು ಮುಖ್ಯಮಂತ್ರಿ ಆಗಿದ್ದಂತಹ ಸಂದರ್ಭದಲ್ಲಿ ಈ ಸದನದ ಸದಸ್ಯರು ಬಡವರಿಗೆ ಭೂಮಿ ಪಡೆಯಲಿಕ್ಕೆ ಇನ್ನೊಂದು ಅವಕಾಶ ಬೇಕು ಎಂದು ಹೇಳಿ ನಾವೆಲ್ಲಾ ಪ್ರತಿಭಟನೆ ಮಾಡಿದಾಗ ಮತ್ತೊಂದು ಅವಕಾಶ ಕೊಟ್ಟರು. ಇಷ್ಟು ಬಾಕಿ ಇರುವುದಕ್ಕೆ ಕಾರಣವೇನು?

ಶ್ರೀ ಜಗದೀಶ್ ಶೆಟ್ಟರ್ : (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮೊದಲನೇ ಪ್ರಶ್ನೆಗೆ ಸರ್ಕಾರಕ್ಕೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ಬಾಕಿ ಇರುವಂತಹದು ಎಷ್ಟು ಎಂಬ ಬಗ್ಗೆ ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರೇ ನಾವು ಉತ್ತರ ಕೊಟಿರುವುದನ್ನೇ ವಿವರಣೆಯಾಗಿ ಹೇಳಿದ್ದಾರೆ. ಮತ್ತೆ ನಾನು ವಿವರಕ್ಕೆ ಹೋಗುವುದಿಲ್ಲ. ನಮೂನೆ–50ರಲ್ಲಿ 29,361 ಅರ್ಜಿಗಳು ಬಾಕಿ ಇದ್ದಾವೆ. ನಮೂನೆ–53ರಲ್ಲಿ 4,35,842 ಬಾಕಿ ಇದ್ದಾವೆ. ಆದರೆ ಇತ್ಯರ್ಥವಾದಂತಹ ಅರ್ಜಿಯ ಬಗ್ಗೆ ನಾನು ಸದನದ ಗಮನಕ್ಕೆ ತರುತ್ತಿದ್ದೇನೆ. 10,62,548 ಅರ್ಜಿಗಳನ್ನು 1982 ರಿಂದ ಇಲ್ಲಿಯವರೆಗೆ ವಿಲೇವಾರಿ ಮಾಡಿದ್ದಾರೆ. ನಮೂನೆ–53ರಲ್ಲಿ 6,57,884 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಬಾಕಿ ಇರುವಂತಹ ಅರ್ಜಿಗಳ ವಿಲೇವಾರಿ ಬಗ್ಗೆ ನಾವು ಆದಷ್ಟು ಶೀಘ್ರ ವಿಲೇವಾರಿ ಮಾಡುವಂತಹ ಕ್ರಮವನ್ನು ನವು ಕೈಗೊಳ್ಳುತ್ತಿದ್ದೇವೆ. ಈಗ ಇಲ್ಲಿಯವರೆಗೆ ಅಕ್ರಮ ಸಕ್ರಮ ಸಮಿತಿಗಳನ್ನು ಏಕೆ ಮಾಡಲಿಲ್ಲ ಎನ್ನುವಂತಹ ವಿಚಾರವನ್ನು ಮಾನ್ಯ ಹಿರಿಯ ಸದಸ್ಯರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಆ ಒಂದು ಪ್ರೋಸೆಸ್ ನಡೆಯುತ್ತಿದೆ. ಬಗರ್‌ಹುಕುಂ ಸಮಿತಿಗಳನ್ನು ಪ್ರತಿ ಒಂದು ತಾಲ್ಲೂಕಿಗೆ ನೇಮಕ ಮಾಡುವಂತಹ ಪ್ರೋಸೆಸ್ ನಡೆಯುತ್ತಿದೆ. ಕೆಲವೊಂದು ಕಡೆ ಹೆಸರು ಬಂದಿರಲಿಲ್ಲ, ಕೆಲವು ಕಡೆ ಬಂದಿತ್ತು. ಕೆಲವು ಕಡೆ ಇನ್‌ಕಂಪ್ಲೀಟ್ ಇತ್ತು. ಅವೆಲ್ಲವನ್ನೂ ತೆಗೆದುಕೊಂಡು ಈಗಾಗಲೇ 30ಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ ಆ ಸಮಿತಿಗಳ ನೇಮಕಾತಿಗೆ ಪ್ರೋಸೆಸ್ ಪ್ರಾರಂಭ ಆಗಿದೆ. ಇನ್ನು 15 ದಿವಸಗಳಲ್ಲಿ ಉಳಿದ ಎಲ್ಲಾ ತಾಲ್ಲೂಕುಗಳಲ್ಲಿ ಸಮಿತಿ ಮಾಡುವುದನ್ನು ನಾನು ಕಂಪ್ಲೀಟ್ ಮಾಡುತ್ತೇನೆಂದು ನಾನು ಇಲ್ಲಿ ಸ್ಪಷ್ಟವಾಗಿ ಭರವಸೆ ಕೊಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಮಂತ್ರಿಗಳು, ಒಂದನ್ನು ಸ್ಪಷ್ಟ ಪಡಿಸಬೇಕು. ಸಕ್ರಮೀಕರಣ ಸಮಿತಿಗಳನ್ನು ಮಾಡತಕ್ಕಂಥ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಎರಡು ವರ್ಷದಿಂದ ಮಾಡುತ್ತಿದ್ದಾರಾ? ಎರಡು ವರ್ಷ ಬೇಕಾಯಿತಾ? ಹೆಸರುಗಳು ಬಂದಿಲ್ಲ, ಎಂದು ಹೇಳುತ್ತಾರೆ. ಅವರು ಸದನಕ್ಕೆ ಸತ್ಯವಾದ ಮಾಹಿತಿಯನ್ನು ಕೊಡುತ್ತಿಲ್ಲ. ಪ್ರಾರಂಭದಲ್ಲೇ ಎಲ್ಲಾ ಶಾಸಕರುಗಳಿಂದ ಅಂದರೆ ಎಲ್ಲಾ ಕ್ಷೇತ್ರದಿಂದ ಹೆಸರುಗಳು ಬಂದಿವೆ. ಸದಸ್ಯರುಗಳು ಹೆಸರನ್ನು ಕೊಟ್ಟಿದ್ದಾರೆ. ಆದರೆ ಇಲ್ಲಿ ಏಕೆ ಬಂದಿಲ್ಲ ಎಂದು ಹೇಳುತ್ತಿದ್ದಾರೆ ಎಂದರೆ, ಮೊದಲು ಒಂದು ಸರ್ಕಾರ ಇತ್ತು. ಆ ಸರ್ಕಾರದ ಭಾಗಸ್ಥರು ಬೇರೆ ಇದ್ದರು. ಆಗ ಅವರ ಹೆಸರು ಬಂದಾಗ, ಇವರು ಹೆಸರು ಬಂದಾಗ, ನಮ್ಮ ಪಾರ್ಟಿಯವರಿಗೆ ಇಷ್ಟು ಬೇಕು; ನಮ್ಮ ಪಾರ್ಟಿಯವರಿಗೆ ಇಷ್ಟು ಬೇಕು ಎಂದು ತಕರಾರು ಇಟ್ಟುಕೊಂಡು ಅವರು ಒಂದಷ್ಟು ಹೊಸ ಹೆಸರು ತಂದರು. ಈಗ ಇನ್ನೊಂದು ಪಕ್ಷ ಸೇರಿಕೊಂಡಿದೆ. ಇಲ್ಲಿ ಮತ್ತೆ ತಕರಾರು. ಅವರಿಗೆ ಎಷ್ಟು ಕೊಡಬೇಕು? ಇವರಿಗೆ ಎಷ್ಟು ಕೊಡಬೇಕು ಎಂದು ಹೇಳಿ ತಕರಾರು. ಅಂದರೆ ಇವರಿವರಲ್ಲಿ ಭಾಗ ಹಂಚಿಕೊಳ್ಳುವುದರಲ್ಲಿ ತಕರಾರು. ಶಾಸಕರ ಮಾತಿಗೆ ಏನೂ ಬೆಲೆ ಇಲ್ಲ. ನಮ್ಮ ಪಾರ್ಟಿಗೆ ಇಷ್ಟು ಇರಬೇಕು, ನಿಮ್ಮ ಪಾರ್ಟಿಗೆ ಇಷ್ಟು ಇರಬೇಕು ಎನ್ನತಕ್ಕ ರೀತಿಯಲ್ಲಿ ತಕರಾರು ಮಾಡಿಕೊಂಡು ಪೆಂಡಿಂಗ್ ಇಟ್ಟು, ಇನ್ನೂ ಹೆಸರುಗಳು

ಪೂರ್ತಿಯಾಗಿ ಬಂದಿಲ್ಲ, ಕೆಲವು ಬಂದಿದೆ. ಕೆಲವು ಬಂದಿಲ್ಲ ಎಂದು ಹೇಳಿ ಮಾಹಿತಿ ಏನು ಕೊಡತಕ್ಕದ್ದು ಇದೆ, ಇದು ಸರಿಯಾದಂತಹ ಉತ್ತರ ಅಲ್ಲ. ಜವಾಬ್ದಾರಿ ಸ್ಥಾನದಲ್ಲಿರತಕ್ಕ ಮಂತ್ರಿಗಳು ಒಬ್ಬರು ಈ ರೀತಿ ಹೇಳಬಾರದು. ಬೇಕಾದರೆ ಅವರು ಸದನದ ಮುಂದೆ ಇಡಲಿ. 2004ನೇ ಇಸವಿಯಿಂದ ಯಾವ ಕ್ಷೇತ್ರದಿಂದ ಸದಸ್ಯರ ಪಟ್ಟಿ ನಮಗೆ ಲಭ್ಯವಾಗಿಲ್ಲ? ನೀವು ತಹಶೀಲ್ದಾರ್ ಕಛೇರಿಯಲ್ಲಿ ಕೇಳಿದ್ದೀರಿ, ಇನ್ ಟರ್ನ್ ಅವರು ಶಾಸಕರನ್ನು ಕೇಳಿದ್ದಾರೆ. ಅವರು ಪಟ್ಟಿಗಳನ್ನು ಕೊಟ್ಟಿದ್ದಾರೆ. ದಯವಿಟ್ಟು ಸದನಕ್ಕೆ ಮಾನ್ಯ ಮಂತ್ರಿಗಳು ಕೊಡಬೇಕು. ಏನೆಂದು ಕೊಡಬೇಕು? 2004ನೇ ಇಸವಿಯಲ್ಲಿ ಅಧಿಕಾರಕ್ಕೆ ಬಂದ ಈ ಸರ್ಕಾರ ಆ ಸಂದರ್ಭದಲ್ಲಿ ನೀವು ತಹಶೀಲ್ದಾರ್ ಅವರಿಗೆ ಸರ್ಕುಲರ್ ಅನ್ನು ಕಳಿಸಿದ್ದೀರಿ. ಅಂದಿನಿಂದ ಇವತ್ತಿನವರೆಗೆ ಯಾವ ಕ್ಷೇತ್ರದ ಶಾಸಕರು ಹೆಸರನ್ನು ಕೊಟ್ಟಿಲ್ಲ ಎನ್ನತಕ್ಕದ್ದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಈ ಬಗರ್ ಹುಕುಂ ಸಮಿತಿ ಕೋರಂ ಏನು ಇದೆ, ಅಧ್ಯಕ್ಷರು ಮತ್ತು ಕಾರ್ಯದರ್ಶಿ ಮಾತ್ರ. ನೀವು ಇಡೀ ಸಮಿತಿಯನ್ನು ಬರ್ಕನ್ ಮಾಡುವಂತಹ ಅವಶ್ಯಕತೆ ಇರಲಿಲ್ಲ. ಬೈಠಕ್ ಆದರೂ ನಡೆದು ಕೆಲವು ಅರ್ಜಿಗಳನ್ನು ಇಲ್ಲಿಯವರೆಗೆ ವಿಲೇವಾರಿ ಮಾಡಬಹುದಿತ್ತು. ಮಧ್ಯದಲ್ಲಿ ಒಂದು ಸಾರಿ ಹಿಂದಿನ ಸರ್ಕಾರ ಸಮಿತಿಯನ್ನು ಮಾಡಿತ್ತು. ಇಡೀ ಸಮಿತಿಯನ್ನು ಬರ್ಕನ್ಥ್ ಮಾಡುವುದಕ್ಕಿಂತ ಸದಸ್ಯರನ್ನು ಬದಲಾವಣೆ ಮಾಡುವುದನ್ನು ಅಲ್ಲಿಯವರೆಗೆ ಮುಂದುವರಿಸಬಹುದಾಗಿತ್ತು. ಮತ್ತೇ ತಾವೇನು ಲೆಕ್ಕವನ್ನು ಕೊಟ್ಟಿದ್ದೀರಿ, ನಮೂನೆಯ 50 ರಲ್ಲಿ ಕೇವಲ 29,361 ಅರ್ಜಿಗಳು ಬಾಕಿ ಇದೆ ಎಂದು ಲೆಕ್ಕವನ್ನು ಕೊಟ್ಟಿದ್ದೀರಿ. ಅದು ತಪ್ಪಾಗುತ್ತದೆ. ಏಕೆಂದರೆ 29,361 ಹಿಂದೆ ಕುಂಕಿ ಜಮೀನಿಗೆ 50 ರಲ್ಲಿ ಕೊಡಲಿಕ್ಕೆ ಅವಕಾಶ ಇಲ್ಲ ಎಂದು ರಿಜೆಕ್ಟ್ ಮಾಡಿದ್ದು ಒಂದೇ ಕಾರಣಕ್ಕಾಗಿ. 53ರಲ್ಲಿ ಈಗ ಪುನಃ ಕೊಡಲಿಕ್ಕೆ ಅವಕಾಶ ಇದೆ. ಹಿಂದೆ ನಮೂನೆ 50ರಲ್ಲಿ ಕೊಟ್ಟಂತಹ ಅರ್ಜಿಗಳನ್ನು ಪುನರ್ ಪರಿಶೀಲನೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮುಖೇನ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

11.30 A.M.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ಗುಲ್ಬರ್ಗಾ ಹಾಗೂ ಬೀದರ್ ಜಿಲ್ಲೆಗಳ ಬಹಳಷ್ಟು ಕಡೆಗಳಲ್ಲಿ ಬಹಳ ವರ್ಷಗಳಿಂದ ಫಾರೆಸ್ಟ್ ಲ್ಯಾಂಡ್ ಎನ್‌ಕ್ರೋಚ್ ಆಗಿದೆ. ಅವರುಗಳನ್ನು ರೆಗ್ಯುಲರೈಸ್ ಮಾಡುತ್ತೇವೆಂದು ಸರ್ಕಾರ ಪ್ರತಿ ಸಲವೂ ಅವರಿಗೆ ಆಶ್ವಾಸನೆ ಕೊಡುತ್ತಿದೆ. ರಿಸರ್ವ್ಡ್ ಫಾರೆಸ್ಟ್‌ನಲ್ಲಿ ಅವರು ಮಾಡುತ್ತಿರುವ ಸಾಗುವಳಿಯನ್ನು ರೆಗ್ಯುಲರೈಸ್ ಮಾಡಬಾರದೆಂದು ಆರ್ಡಿನೆನ್ಸ್ ಬಂತು, ಕಾನೂನು ಬಂತು. ಆದರೆ, ಅವರುಗಳ ಪರಿಸ್ಥಿತಿ ಏನು? ಸರ್ಕಾರ ಅದರ ಬಗ್ಗೆ ಏನಾದರೂ ಪ್ರಯತ್ನ ಮಾಡುತ್ತದೆಯೇ? ಸುಮಾರು ವರ್ಷಗಳಿಂದಲೂ ಜಮೀನುರಹಿತರು ಫಾರೆಸ್ಟ್ ಲ್ಯಾಂಡ್ ಅನ್ನು ಕಲ್ಟಿವೇಟ್ ಮಾಡುತ್ತಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ : ಇದಕ್ಕೆ ಇವರು ಸಮಿತಿಗಳನ್ನು ಮಾಡಬೇಕು. ಅವುಗಳನ್ನು ಹದಿನೈದು ದಿವಸದೊಳಗೆ ಮಾಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ, ಧನ್ಯವಾದಗಳು. ಆದಷ್ಟು ಬೇಗ ಮಾಡಲಿ. ಇನ್ನೊಂದು ವಿಚಾರವೇನೆಂದರೆ, ಇವರು ಸಮಿತಿಗಳನ್ನು ಮಾಡಿದರೂ ಅದು ಕೆಲಸ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ಸರ್ವೇಯರ್ ಇಲ್ಲ, ರೆವಿನ್ಯೂ ಇನ್ಸ್‌ಪೆಕ್ಟರ್ ಇಲ್ಲ, ವಿಲೇಜ್ ಅಕೌಂಟೆಂಟ್ ಇಲ್ಲ, ರೆಕಾರ್ಡ್ ಮಾಡುವವರು ಯಾರೂ ಇಲ್ಲ. ಇದು ಇರುವ ಪರಿಸ್ಥಿತಿ. ಆ ಹುದ್ದೆಗಳನ್ನು ಫಿಲ್-ಅಪ್ ಮಾಡಿ ಬಡವರು ಕೆಲಸ ಮಾಡುವುದಕ್ಕೆ ಆದಷ್ಟು ಬೇಗ ಅವಕಾಶ ಮಾಡಿಕೊಡುತ್ತೀರಾ ಎಂದು ಕೇಳುತ್ತಿದ್ದೇನೆ.

(ಈ ಹಂತದಲ್ಲಿ ಬಹಳಷ್ಟು ಮಾನ್ಯ ಸದಸ್ಯರುಗಳು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು : ಪ್ರಶ್ನೋತ್ತರ ಅವಧಿಯಲ್ಲಿ ಈ ರೀತಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಇದು ಗಹನವಾದ ವಿಷಯ, ಪ್ರಾಮುಖ್ಯತೆ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಇದು ಬಹಳ ಪ್ರಾಮುಖ್ಯವಾದುದು.

ಅಧ್ಯಕ್ಷರು : ಈಗ ಹತ್ತಾರು ಜನ ಮಾನ್ಯ ಸದಸ್ಯರು ಮಾತನಾಡಲು ಎದ್ದು ನಿಂತರೆ ಹೇಗೆ? ಈಗಾಗಲೇ ಒಂದು ಪ್ರಶ್ನೆಗೆ 7-8 ನಿಮಿಷಗಳಾದವು. ಅದರ ಬಗ್ಗೆ ಎಲ್ಲರೂ ನಿಮ್ಮ-ನಿಮ್ಮ ಅಭಿಪ್ರಾಯ, ಪ್ರಶ್ನೆ, ಉಪ ಪ್ರಶ್ನೆಗಳನ್ನು ಕೇಳುತ್ತಾ ಹೋದರೆ ಸಮಯ ಎಲ್ಲಿದೆ?

ಒಬ್ಬ ಮಾನ್ಯ ಸದಸ್ಯರು : ಎಲ್ಲರಿಗೂ ಮಾತನಾಡುವುದಕ್ಕೆ ಎರಡೆರಡು ನಿಮಿಷಗಳ ಅವಕಾಶ ಮಾಡಿಕೊಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ....

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೆ, ಇದನ್ನು half an hour discussion ತೆಗೆದುಕೊಳ್ಳೋಣ.

ಪ್ರಶ್ನೆ ಸಂಖ್ಯೆ :

ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ

(ಗೈರು ಹಾಜರಾಗಿದ್ದರು)

ಅಧ್ಯಕ್ಷರು : ಜಯಪ್ರಕಾಶ್ ಹೆಗ್ಡೆಯವರೆ, ನಿಮ್ಮ ಪ್ರಶ್ನೆಯನ್ನು ಕೊನೆಯಲ್ಲಿ ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದುದರಿಂದ, ಕೊನೆಯಲ್ಲಿ ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇದು ಬಹಳ ಪ್ರಮುಖ ಪ್ರಶ್ನೆಯಾದುದರಿಂದ ಉತ್ತರ ಕೊಡಿಸಿ.